೪೭ ಪಂಪುಸೆಟ್ಟುಗಳಿಗೆ ಕರೆಂಟ್ ಇಲ್ಲದೆ ತೊಂದರೆ ಪಡುವುದಂ ತಪ್ಪುತ್ತದೆ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಆಶ್ವಾಸನೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಸರ್ಕಾರ ಒಳ್ಳೆಯ ಕೆಲಸ ಮಾಡಿದೆ. ಒಂದೂ ಹಾರ್ಸ್ ಪವರ್‌ಗೆ ೫೦ ರೂಪಾಯಿ ಮಾಡಿದೆ. ೨೫ ಕೋಟಿ ರೂಪಾಯಿ ಕೊಟ್ಟರೆ ಇಡೀ ರಾಜ್ಯಕ್ಕೆ ಆಗುವಷ್ಟು ಪೋಲುಗಳನ್ನು ಒದಗಿಸುವವರಿದ್ದಾರೆಂದು ಕೇಳಿದ್ದೇನೆ. ಆ ದಿಸೆಯಲ್ಲಿ ಒಂದು ಯೋಜನೆಯನ್ನು ಮಾಡಿ, ತಕ್ಷಣ ನಮ್ಮ ಭಾಗಕ್ಕೆ ೬೩ ಟ್ರಾನ್ಸ್‌ಫಾರ್ಮರ್ ೧೦೦-೧೫೦ ಪೋಲು ಗಳನ್ನು ಜೊತೆಗೆ ಇನ್ಸುಲೇಷನ್ ಒದಗಿಸಿದರೆ ರೈತರಿಗೆ ತುಂಬ ಅನುಕೂಲವಾಗುತ್ತದೆ. ಇವತ್ತು ನಮ್ಮ ಭಾಗದ ರೈತರ ಕಣ್ಣಲ್ಲಿ ರಕ್ತ ಸುರಿಯುತ್ತಿದೆ ಆದ್ದರಿಂದ ಮಾನ್ಯ ಮಂತ್ರಿಗಳು ನಮ್ಮ ಸಮಸ್ಯೆಗಳ ಬಗ್ಗೆ ಗಮನ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಮಾನ್ಯ ಅಧ್ಯಕ್ಷರೇ, ಮುಳಬಾಗಿಲು ತಾಲ್ಲೂಕಿನಲ್ಲಿ ವಿದ್ಯುಚ್ಛಕ್ತಿ ಸರಬರಾಜು ಆಗುತ್ತಿಲ್ಲ. ನೂರಾರು ಪಂಪುಸೆಟ್ಟುಗಳು ಕೆಲಸ ಮಾಡುತ್ತಿಲ್ಲ, ಕೋಲಾರ ಜಿಲ್ಲೆಯನ್ನು ಅಭಾವಪೀಡಿತ ಪ್ರದೇಶವೆಂದು ಪರಿಗಣಿಸಿದೆ. ನಮ್ಮ ತಾಲ್ಲೂಕಿನಲ್ಲಿ ಬಾವಿಗಳಲ್ಲಿ ನೀರೇ ಇಲ್ಲ. ಅಲ್ಪಸ್ವಲ್ಪ ನೀರು ಇದ್ದು ಪಂಪ್ ಮಾಡೋಣ ಎಂದರೆ ವಿದ್ಯುಚ್ಛಕ್ತಿ ಇರುವುದಿಲ್ಲ. ಮೂರು ನಾಲ್ಕು ಗಂಟೆಗಳ ಕಾಲ ವಿದ್ಯುಚ್ಛಕ್ತಿ ಇರುವುದಿಲ್ಲ. ಇದರಿಂದ ನಮ್ಮ ತಾಲ್ಲೂಕಿನ ರೈತರಿಗೆ ಲಕ್ಷಾಂತರ ರೂಪಾಯಿಗಳ ನಷ್ಟ ಉಂಟಾಗಿರುತ್ತದೆ. ಈ ಬಗ್ಗೆ ಸರ್ಕಾರಕ್ಕೆ, ಮಂತ್ರಿಗಳಿಗೆ ಮತ್ತು ವಿದ್ಯುಚ್ಛಕ್ತಿ ಮಂಡಳಿ ಛೇರ್ಮನ್‌ರವರಿಗೆ ಅಧಿಕಾರಿಗಳವರಿಗೆ ಟೆಲಿಗ್ರಾಮ್ ಮುಖಾಂತರ ಕೇಳಿಕೊಂಡಿದ್ದೇವೆ, ಯಾವ ಕಾರ್ಯಕ್ರಮವನ್ನು ಮಾಡಿಲ್ಲ.

ಅಧ್ಯಕ್ಷರು.—ಕೊಪ್ಪಳದಿಂದ ಮೆಟೀರಿಯಲ್ಸ್ ಬರುವುದು ಇದೆ, ಒಂದು ವಾರದೊಳಗೆ ವಿದ್ಯುಚ್ಛಕ್ತಿ ಸಪ್ಲೈ ಮಾಡುತ್ತೇವೆಂದು ಹೇಳಿದ್ದಾರೆ.

ಶ್ರೀ ಜೆ. ಎಂ. ರೆಡ್ಡಿ.—ಎಲೆಕ್ಟ್ರಿಸಿಟಿ ಇಲ್ಲದೆ ರೈತರಿಗೆ ತೊಂದರೆಯಾಗಿದೆ ದಯಮಾಡಿ ಅದರ ಬಗ್ಗೆ ತೀವ್ರ ಗಮನಕೊಟ್ಟು ತಕ್ಷಣ ಸರಿಮಾಡಿಸಬೇಕೆಂದು ಅಧ್ಯಕ್ಷರ ಮೂಲಕ ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತಿದ್ದೇನೆ. ಮುಳಬಾಗಿಲು ಭಾಗದ ರೈತರಿಗೆ ಬಹಳ ಉದಾಸೀನ ಮಾಡಿದ್ದಾರೆ. ಯಾರು ಕೇಳಿದರೂ ಸಾಮಾನುಗಳು ಇಲ್ಲಾ, ಪೋಲುಗಳು ಇಲ್ಲವೆಂದು ಹೇಳುತ್ತಿದ್ದಾರೆ. ನಮ್ಮ ತಾಲ್ಲೂಕಿನಲ್ಲಿ ಸುಮಾರು ೫೦ ನೂರು ಡಿಮಾಂಡ್‌ಗಳು ಇವೆ, ಬೇಗ ಪಂಪ್‌ಸೆಟ್ಟುಗಳಿಗೆ ವಿದ್ಯುಚ್ಛಕ್ತಿ ಒದಗಿಸಿಕೊಡಬೇಕು ರೂರಲ್ ಎಲೆಕ್ಟ್ರಿಫಿಕೇಷನ್ ತಕ್ಷಣ ತೆಗೆದುಕೊಳ್ಳಬೇಕೆಂದು ಅಧ್ಯಕ್ಷರ ಮುಖಾಂತರ ಕೇಳಿಕೊಳ್ಳುತ್ತೇನೆ.

ಶ್ರೀ ಜೆ. ಎಚ್. ಆಶ್ವತ್ಥರೆಡ್ಡಿ.—ಅಧ್ಯಕ್ಷರೇ, ಮಾನ್ಯ ಪಿ. ಎನ್ ರೆಡ್ಡಿಯವರು ಮತ್ತು ಜಿ. ಎಂ. ರೆಡ್ಡಿಯವರು ಕೋಲಾರ ಜಿಲ್ಲೆಗೆ ಮೆಟೀರಿಯಲ್ಸ್ ಸಪ್ಲೈ ಇಲ್ಲವೆಂದು ಹೇಳಿದ್ದಾರೆ. ಈಗಾಗಲೇ ೨೫೦ ಪಂಪ್‌ಸೆಟ್ಟುಗಳಿಗೆ ಕನೆಕ್ಷನ್ ಕೊಟ್ಟಿದ್ದೇವೆ. ಕಂಬಗಳನ್ನು ಹರಿಹರ ಮತ್ತು ಕೊಪ್ಪಳದಿಂದ ತರಿಸಿ ಕೊಟ್ಟಿದ್ದೇವೆ. ಕೋಲಾರ ಜಿಲ್ಲೆಯ ಮುಳಬಾಗಿಲು, ಶ್ರೀನಿವಾಸಪುರ ತಾಲ್ಲೂಕುಗಳಿಗೆ ಇನ್ನು ಒಂದು ವಾರದೊಳಗೆ ಸರಬರಾಜು ಮಾಡುತ್ತೇವೆ. ವಿದ್ಯುಚ್ಛಕ್ತಿ ಸೆಟ್‌ಡೌನ್ ಆಗುತ್ತಿರುವುದು ತಮಗೆಲ್ಲರಿಗೂ ಗೊತ್ತಿದೆ. ಕಾಳೀನದಿಯ ಜನರೇಟರ್‌ನ್ನು ರಿಪೇರಿ ಮಾಡುತ್ತಿರುವುದರಿಂದ ಒಂದು ಗಂಟೆ ಮಾತ್ರ ವಿದ್ಯುಚ್ಛಕ್ತಿಯನ್ನು ನಿಲ್ಲಿಸಲಾಗುತ್ತಿದೆ. ಪಂಪ್‌ಸೆಟ್ ಹೊಂದಿರತಕ್ಕ ರೈತರಿಗೆ ಹೆಚ್ಚಿನ ಆದ್ಯತೆ ಕೊಟ್ಟು ರೈತರ ತೊಂದರೆ ತಪ್ಪಿಸುವುದಕ್ಕೆ ಸರ್ಕಾರ ಪ್ರಯತ್ನ ಮಾಡುತ್ತದೆ. ಮಾನ್ಯ ಸದಸ್ಯರು ಹೇಳಿರತಕ್ಕ ಬೇಡಿಕೆಗಳನ್ನು ಆದಷ್ಟು ಶೀಘ್ರವಾಗಿ ಈಡೇರಿಸುತ್ತೇನೆ ಎಂದು ಈ ಸಭೆಗೆ ತಿಳಿಸಲು ಇಚ್ಛೆ ಪಡುತ್ತೇನೆ.

(*ii*) *re : Assult on Principal of Govt. Polytechnic, Bidar*

ಶ್ರೀ ಟಿ. ಬೌಡಯ್ಯ.—ಬೀದರ್ ಪಾಲಿಟೆಕ್ನಿಕ್ ಕಾಲೇಜ್‌ನಲ್ಲಿ ಪ್ರಿನ್ಸಿಪಾಲರವರ ಮೇಲೆ ನಡೆದ ಹಲ್ಲೆಯ ಬಗ್ಗೆ ಮುಖ್ಯಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ,

SRI R. GUNDU RAO (Chief Minister).— It is reported that on the evening of 13-2-1981, when Sri R. Y. Kabade, Principal of the Government Polytechnic, Bidar, was returning home with his Office Superintendent, Shri Bijapure, they were assaulted by a group of three or four persons. As a result

Shri Kabade sustained head injuries. He was immediately shifted to the hospital. On the basis of his complaint, a case has been registered in Gandhi Gunj Police Station and investigation has been taken up. Six persons have been arrested. The Principal has been discharged from the hospital on 25-2-1981. The police are keeping strict vigil to avoid any law and order problems. The situation at present is peaceful.

2. It is learnt that the student community of the Polytechnic is divided into two groups and so also the staff of the Polytechnic. The Education Department is taking steps to establish a cordial and peaceful atmosphere between the groups in this institution.

ಶ್ರೀ ಟಿ. ಚೌಡಯ್ಯ.—ಅಧ್ಯಕ್ಷರೇ, ಈ ಬಗ್ಗೆ ಕೆಲವು ಕ್ಲಾರಿಫಿಕೇಷನ್ ಕೇಳುವುದಕ್ಕೆ ಮುಂಚೆ ಈ ಘಟನೆಯ ಬಗ್ಗೆ ಮುಖ್ಯಮಂತ್ರಿಗಳು ತಮ್ಮ ಹೇಳಿಕೆಯಲ್ಲಿ ತಿಳಿಸಿರತಕ್ಕ ಅಂಶಗಳು ವಾಸ್ತವವಾಗಿ ಇವೆ ಎಂದು ಗೊತ್ತಾಗಿದೆ. ಆದರೆ, ಕೊನೆಯ ಪ್ಯಾರದಲ್ಲಿ ' the polytechnic is divided into two groups and so also the staff of the polytechnic ' ಹಾಗೆಂದು ಹೇಳಿ ಅಲ್ಲಿಗೆ ಬಿಟ್ಟಿದ್ದಾರೆ. ವಿದ್ಯಾ ಇಲಾಖೆಯವರು ಈ ಎರಡೂ ಗುಂಪುಗಳಿಗೂ ಐಕ್ಯತೆ ಮತ್ತು ಸಾಮರಸ್ಯವನ್ನು ಉಂಟು ಮಾಡಲು ಪ್ರಯತ್ನ ನಡೆಸುತ್ತಾರೆಂದು ಹೇಳಿ ಹಾಗೆಯೇ ಬಿಟ್ಟಿದ್ದಾರೆ. ಇಲ್ಲಿ ಸರ್ಕಾರದ ಗಮನಕ್ಕೆ ಕೆಲವು ಮುಖ್ಯ ಅಂಶಗಳನ್ನು ತಮ್ಮ ಮುಖಾಂತರ ತಿಳಿಸಲಿಕ್ಕೆ ಪ್ರಯತ್ನಮಾಡುತ್ತೇನೆ. ಈ ಘಟನೆ ನಡೆದಿರುವುದು ವಾಸ್ತವವಾಗಿದೆ. ಕಾರಣವೇನೆಂದರೆ ಸರ್ಕಾರದವರು ನಿಮ್ನವರ್ಗದವರಿಗೆ ಪ್ರಮೋಷನ್ ವೆಕೆನ್ಸಿಗಳ ವಿೂಸಲಾತಿಯನ್ನು ಮಾಡಿದ್ದು, ಆ ಒಂದು ದಿಶೆಯಲ್ಲಿ ಬೀದರ್‌ನಲ್ಲಿ ಕೆಲಸ ಮಾಡತಕ್ಕಂತಹ ಸಂದರ್ಭದಲ್ಲಿ ಅವರಿಗೆ ಪ್ರಿನ್ಸಿಪಾಲ್ ಹುದ್ದೆಯು ಪ್ರಮೋಷನ್ ಮುಖಾಂತರ ದೊರಕಿದರೆ, ಅವರ ಸಹೋದ್ಯೋಗಿಗಳಲ್ಲಿ ಇವರ ಪ್ರಗತಿಯ ಬಗ್ಗೆ ಅಸೂಯೆ ತರತಕ್ಕ ಕೆಲವು ಮುಂದುವರಿದ ಜನಾಂಗದವರು ಇವರು ಭ್ರಷ್ಟಾಚಾರಿಗಳೆಂದು ಅವರ ಮೇಲೆ ಎನ್‌ಕ್ವಾಯರಿ ಕೂಡ ನಡೆಸಿದ್ದಾರೆ. ಭ್ರಷ್ಟಾಚಾರ ಹಾಗೆ ಹೀಗೆ ಎಂದು ಅವರ ಎನ್‌ಕ್ವಾಯರಿ ಮಾಡಿದಮೇಲೆ ಅವರು ನಿರ್ದೋಷಿಯೆಂದು ಪ್ರೂವ್ ಆಯಿತು. ಇದಾದಮೇಲೆ ನಾನು ಇಲ್ಲಿ ಇರುವುದು ಸರಿಯಿಲ್ಲವೆಂದು, ನನಗೆ ಇಲ್ಲಿ ಮೂರು ವರ್ಷಗಳು ಆಗಿದೆ ನನ್ನನ್ನು ಬೇರೆಕಡೆ ವರ್ಗಮಾಡಿ ಎಂದು ಕೇಳಿಕೊಂಡಿದ್ದಾರೆ. ವರ್ಗಮಾಡಿದಮೇಲೆ ಈ ಘಟನೆ ನಡೆಯುವ ಸ್ವಲ್ಪ ಮುಂಚಿತವಾಗಿ ಅದನ್ನು ಅಬೆಯನ್ಸ್‌ನಲ್ಲಿಟ್ಟಿದ್ದಾರೆ, ಅದು ಏನು ಕಾರಣ ಗೊತ್ತಿಲ್ಲ. ಇದಾದ ಕೆಲವು ದಿವಸಗಳಲ್ಲಿ ಸಾಯಂಕಾಲ ಮನೆಗೆ ಬರುವಾಗ ಹತ್ತಾಗಿ ಕೆಲವು ವ್ಯಕ್ತಿಗಳು ಮುಖವಾಡ ಹಾಕಿಕೊಂಡು ಬಂದು ಇವರ ತಲೆಯಮೇಲೆ ಏಟು ಹೊಡೆದಿದ್ದಾರೆ, ಏನಾದರೂ ಎರಡನೆಯ ಏಟು ತಲೆಗೆ ಬಿದ್ದಿದ್ದರೆ ಅವರು ಮೃತರಾಗುತ್ತಿದ್ದರು, ಏಟು ಹೊಡೆಯುವಾಗ ಕೈಗಳನ್ನು ಕೊಟ್ಟಿದ್ದಾರೆ, ಕೈಗೆ ಹೊಡೆತ ಬಿದ್ದು ಆಮೇಲೆ ತಲೆಗೆ ಬಲವಾದ ಹೊಡೆತ ಬಿದ್ದಿದೆ. ನನಗೆ ಬಂದಿರುವ ವರದಿಯ ಪ್ರಕಾರ ತಲೆಗೆ ೯ ಕಡೆ ಏಟು ಬಿದ್ದಿದೆ. ಶುಶ್ರೂಷೆ ಪಡೆಯತಕ್ಕ ಸಂದರ್ಭದಲ್ಲಿ ಈ ಒಂದು ಘಟನೆಯ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳಿಗೆ ದಲಿತ ಮತ್ತು ಮೈನಾರಿಟಿ ವಿದ್ಯಾರ್ಥಿಗಳು ಒಂದಾಗಿ ಫೆಬ್ರುವರಿ ೧೪ರಂದು ಬರೆದು ತಿಳಿಸಿದ್ದಾರೆ. ಅದರ ಬಗ್ಗೆ ದಿಟೇಲ್ಸ್ ಇದೆ, ನಾನು ಹೇಳುವುದಕ್ಕೆ ಇಚ್ಛೆ ಪಡುವುದಿಲ್ಲ. ಇಲ್ಲಿ ಅಪರಾಧಿಗಳನ್ನು ಪಟ್ಟಿಮಾಡಿ ಹೇಳಿದ್ದಾರೆ. ಅದು ಸರ್ಕಾರದ ಗಮನಕ್ಕೆ ಗೊತ್ತಿದೆ.

ಅಧ್ಯಕ್ಷರು.—ಹೆಚ್ಚಿನ ವಿವರಗಳು ಇದ್ದರೆ, ಕಳುಹಿಸಿಕೊಡಿ.

ಶ್ರೀ ಟಿ. ಚೌಡಯ್ಯ.—ತದನಂತರ ಅಲ್ಲಿ ಸಂಬಂಧಪಟ್ಟ ಪೋಲೀಸ್ ಸಬ್‌ಇನ್ಸ್‌ಪೆಕ್ಟರಿಗೆ ೧೭ನೇ ತಾರೀಖು ಪ್ರಿನ್ಸಿಪಾಲರಿಗೆ ಪ್ರಾಣ ರಕ್ಷಣೆ ಕೊಡಬೇಕೆಂದು ಸಂಬಂಧಪಟ್ಟವರಿಗೆ ಪತ್ರ ಬರೆದಿದ್ದಾರೆ. ಪುನಃ ಪಾಲಿಟೆಕ್ನಿಕ್ ವಿದ್ಯಾರ್ಥಿಗಳು ಮತ್ತು ದಲಿತ ವಿದ್ಯಾರ್ಥಿಗಳು ಕೆಲವು ಸಂಘದವರು ಮನವಿಗಳನ್ನು ಮುಖ್ಯಮಂತ್ರಿಗಳವರಿಗೆ ಕಳುಹಿಸಿ ಕೊಟ್ಟಿದ್ದಾರೆ. ನಾನು ಈ ಸಭೆಯ ಗಮನಕ್ಕೆ ೯ನೇ ತಾರೀಖು ತಂದಾಗ ಇದು ವರದಿ ಬಂದಿದೆ. ವರದಿಯನ್ನು ಮುಖ್ಯಮಂತ್ರಿಗಳು ಒಪ್ಪಿಸಿದ್ದಾರೆ. ಅದರ ಬಗ್ಗೆ ಆಕ್ಷನ್ ತೆಗೆದುಕೊಳ್ಳಬೇಕೆಂದು ಮುಖ್ಯಮಂತ್ರಿಗಳವರನ್ನು ಕೇಳಿಕೊಳ್ಳುತ್ತೇನೆ.

೨-೩೦ ಪಿ.ಎಂ.

ಅಧ್ಯಕ್ಷರೆ, ಈ ಜಾತೀಯವಾದ ಎಲ್ಲಿಗೆ ಮುಕ್ತಾಯವಾಗುತ್ತದೆ. ಇವತ್ತು ಸರ್ಕಾರ ಎಲ್ಲ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಅಧಿಕಾರಿಗಳಿಗೆ ಪ್ರಮೋಷನ್ ಕೊಡುವ ದಿಸೆಯಲ್ಲಿ ಮಾಡಿರುತ್ತಾರೆ. ಈ ಕಮ್ಯುನಲ್ ಫೋರ್ಸ್, ಜಾತಿವಾದ ಎಲ್ಲಿಯವರೆಗೆ ಬರುತ್ತದೆ, ಆದಕ್ಕೆ ಎಲ್ಲಿಯವರೆಗೆ ಪ್ರೋತ್ಸಾಹ ದೊರೆಯುತ್ತದೆ ಅಲ್ಲಿಯವರೆಗೂ ನಿಲ್ಲುವುದಿಲ್ಲ, ಇದು ಎಸ್‌ಪಿ ಯವರಿಗೆ ಗೊತ್ತಿದ್ದರೆ ಅವರು ಒಂದು ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆಯೇ ಬೀದರ್‌ನ ಒಂದು ಹಿಂದಿ ಪತ್ರಿಕೆಯಲ್ಲಿ ೨೦ನೇ ತಾರೀಖು ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆ. ೨೦ನೇ ತಾರೀಖು ಅಂದರೆ ಒಂದು ವಾರದ ಮೇಲೆ ಎಸ್‌ಪಿ ಗುರು ಪ್ರಸಾದ್ ಅವರು ಏನು ಹೇಳಿದ್ದಾರೆ ಎಂದರೆ ನನಗೆ ಅಪರಾಧಿಗಳ ಬಗ್ಗೆ ಯಾರೂ ಹೆಸರನ್ನು ಕೊಟ್ಟಿಲ್ಲ, ಕಂಪ್ಲೇಂಟ್ ಕೊಟ್ಟಿಲ್ಲ, ಆ್ಯಕ್ಷನ್ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ ಎಂದು, ಇದು ಆದಮೇಲೆ ಉರ್ದು ಪತ್ರಿಕೆಯಲ್ಲಿ ಬಂದಿರತಕ್ಕ ಅಂಶವನ್ನು ನಾನು ಉರ್ದು ಬಲ್ಲವರಿಂದ ತಿಳಿದುಕೊಂಡು ಹೇಳುತ್ತಿದ್ದೇನೆ.

ಅಧ್ಯಕ್ಷರು.—ಮಾನ್ಯ ಮುಖ್ಯಮಂತ್ರಿಗಳು ಕೇಸ್ ರಿಜಿಸ್ಟರ್ ಮಾಡಿದ್ದೇವೆಂದು ಸ್ಟೇಟ್ ಮೆಂಟಿನಲ್ಲಿ ಓದಿದ್ದಾರೆ. ಈಗ ತಾವು ಓದುವುದರಿಂದ ಏನು ಪ್ರಯೋಜನ ಬರುತ್ತದೆ.

ಶ್ರೀ ಟಿ. ಚೌಡಯ್ಯ.—ಅಧ್ಯಕ್ಷರೆ, ಇಷ್ಟೆಲ್ಲಾ ಆದರೂ ಅಧಿಕಾರಿಗಳಿಗೆ ರಕ್ಷಣೆ ಸಿಕ್ಕಿಲ್ಲ. ಆದ್ದರಿಂದ ನಾನು ಹೇಳಬೇಕಾಗಿದೆ.

MR. SPEAKER.—This may spoil the investigation also.

ಶ್ರೀ ಟಿ. ಚೌಡಯ್ಯ.—ಅಧ್ಯಕ್ಷರೆ, ಮುಖ್ಯವಾದ ಅಂಶವನ್ನು ಹೇಳಬೇಕು ಎಂದರೆ, ಅಲ್ಲಿ ಕಂಪ್ಲೇಂಟ್ ಕೊಟ್ಟಿದ್ದಾರೆ. ಎಲ್ಲಾ ಆಗಿದೆ, ಪತ್ರಿಕೆಯಲ್ಲಿ ೧೬ನೇ ತಾರೀಖಿನಿಂದ ೨೭ನೇ ತಾರೀಖಿನವರೆಗೆ ವರದಿಯಾಗುತ್ತಿದೆ. ಬೇಕಾದಷ್ಟು ಪ್ರೊಸೆಷನ್ ನಡೆಯುತ್ತಿದೆ ಬಂದ್ ಮಾಡಿದ್ದಾರೆ. ವಿದ್ಯಾರ್ಥಿಗಳ ಮೇಲೆ ಲಾಠಿ ಚಾರ್ಜ್ ಮಾಡಿದ್ದಾರೆ. ಇಷ್ಟೆಲ್ಲಾ ಆದರೂ ಸಹ ಎಸ್‌ಪಿ ಅವರು ಮೊನ್ನೆ, ಮೊನ್ನೆಯ ತನಕ ಅಂದರೆ ಸರ್ಕಾರದವರು ಅಲ್ಲಿನ ವರದಿ ತರಿಸುವವರೆಗೆ ಅವರೇ ರಕ್ಷಣೆ ಮಾಡಿಕೊಳ್ಳಲಿಕ್ಕೆ ಹೇಳಿದ್ದಾರೆ ಒಬ್ಬ ಮಾಜಿ ಶಾಸಕರಿಂದ ನಾನು ತಿಳಿದುಕೊಂಡಿದ್ದೇನೆ. ನಮಗೆ ಸಹಾಯ ಪೂಡಿ ಎಂದು ಕೇಳಿದರೆ, ನಿಮ್ಮ ವಿದ್ಯಾರ್ಥಿಗಳಿದ್ದಾರೆ ಅವರೇ ರಕ್ಷಣೆ ಕೊಡುತ್ತಾರೆ ಎಂದು ಹೇಳಿ ಉಲ್ಲಂಘನೆ ಮಾಡುತಕ್ಕದ್ದು ನಡೆದಿದೆ. ಪ್ರಾಣ ರಕ್ಷಣೆಯ ಬಗ್ಗೆ ಗಮನಕ್ಕೆ ತೆಗೆದುಕೊಳ್ಳದ ಅಧಿಕಾರಿಗಳ ಮೇಲೆ ತಾವು ಏನು ಕ್ರಮ ತೆಗೆದುಕೊಳ್ಳುತ್ತೀರಾ ಎನ್ನುವುದು ನನ್ನ ಮೊದಲನೆಯ ಪ್ರಶ್ನೆ. ಇನ್ನು ಈ ಕೇಸ್ ಯಾವಾಗ ರಿಜಿಸ್ಟರ್ ಆಗಿದೆ. ಅದರ ತಾರೀಖು ತಿಳಿಸಬೇಕು. ಅಪ್ರಹೆನ್‌ಷನ್ ಮೊದಲೇ ಇದ್ದಾಗಲೂ ಕೂಡ, ಅಧಿಕಾರಿಗಳನ್ನು ಕೇಳಿಕೊಂಡು ಮೂರು ವರ್ಷ ಆದ ಮೇಲೆ ವರ್ಗ ಮಾಡಿದ ಕೂಡಲೆ ಏತಕ್ಕೆ ಅಬೆಯೆನ್ಸ್ ಇಟ್ಟರು. ಇದರ ಬಗ್ಗೆ ಏನು ಇನ್‌ವೆಸ್ಟಿಗೇಷನ್ ಮಾಡಿದ್ದೀರಾ ? ಇದಕ್ಕೆ ಏನು ಕಾರಣ ಇರಬೇಕು ಎನ್ನುವುದನ್ನು ಸರ್ಕಾರದವರು ಪರಿಶೀಲನೆ ಮಾಡುತ್ತೀರಾ ? ಈಗ ಇರತಕ್ಕ ಪರಿಸ್ಥಿತಿಯಲ್ಲಿ ಮುಂದೆ ಆತನಿಗೆ ಸರ್ಕಾರ ಯಾವರೀತಿ ರಕ್ಷಣೆ ಕೊಡಲಿಕ್ಕೆ ಆಲೋಚನೆ ಮಾಡಿದೆ ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್.ಎಸ್. ಅರಕೇರಿ (ಬಳ್ಳಾರಿ).—ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳ ಹೇಳಿಕೆಯನ್ನು ನಾನು ಸ್ವಾಗತಿಸುತ್ತೇನೆ. ೬ ಜನರನ್ನು ಈಗಾಗಲೇ ಅರೆಸ್ಟ್ ಮಾಡಿದ್ದೇವೆಂದು ಹೇಳಿದ್ದಾರೆ. The police are keeping strict vigil to avoid any law and order problems. ಎನ್ನುವಂಥ ಹೇಳಿಕೆ ಸಮಯೋಚಿತ ಮಾನ್ಯ ಸದಸ್ಯರಾದ ಚೌಡಯ್ಯನವರು ಏನೂ ಹೇಳಿದ್ದಾರೆ ಅದನ್ನು ನಾನು ರಿಪೀಟ್ ಮಾಡಲಿಕ್ಕೆ ಹೋಗುವುದಿಲ್ಲ. ನಮ್ಮ ಇಡೀ ಕರ್ನಾಟಕದಲ್ಲಿ ಒಬ್ಬ ಹರಿಜನ ವ್ಯಕ್ತಿ ಪಾಲಿಟಿಕ್ನಿಕ್ ಇನ್‌ಸ್ಟಿಟ್ಯೂಟ್‌ಗೆ ಪ್ರಿನ್ಸಿಪಾಲ್ ಆಗಿದ್ದು ಮೊದಲನೆಯ ಸಲ. ಇವರು ಇನ್‌ಸ್ಟಿಟ್ಯೂಟ್‌ಗೆ ಹೆಡ್ ಆಗಿದ್ದಾರೆ ಎಂದು ಇವರನ್ನು ಜೈಹೊಡೆಯಲಿಕ್ಕೆ ಹೋದರೆ ಹೇಗೆ ?

ಅಧ್ಯಕ್ಷರು.—ಮಾನ್ಯ ಸದಸ್ಯರು ವಕೀಲರು, ನೀವೇ ಈ ರೀತಿ ಪ್ರಾರಂಭ ಮಾಡಿದರೆ ಹೇಗೆ ? ಈ ಕೇಸ್ ಇನ್‌ವೆಸ್ಟಿಗೇಷನ್‌ನಲ್ಲಿರುವುದರಿಂದ, ಅಷ್ಟು ಪ್ರಸ್ತಾಪ ಮಾಡುವುದು ಬೇಡ.

ಶ್ರೀ ಎಸ್.ಎಸ್. ಅರಕೇರಿ.—ಇವತ್ತು ದಲಿತ ಮತ್ತು ಮೈನಾರಿಟಿ ಫೆಡರೇಷನ್‌ನಲ್ಲಿ ಶಾಂತ ರೀತಿಯಿಂದ ಬಗೆ ಹರಿಸಬೇಕು ಎಂದು ಪ್ರಯತ್ನ ಮಾಡಿದರೂ ಕೂಡ, ಈ ಪ್ರಯತ್ನ ನಡೆದಿದೆ ಎಂದರೆ

ಕೇಸ್ ರಿಜಿಸ್ಟರ್ ಆಗಿದೆ ಎಂದು ಹೇಳುತ್ತಾರೆ. There was an attempt to murder the principal. ಸೀರಿಯೆಸ್‌ನೆಸ್ ಇರುವುದರಿಂದ. ಆವರಿಗೆ ಇದರ ಒಗ್ಗೆ ಮುಖ್ಯ ಮಂತ್ರಿಗಳು ಸೀರಿಯಸ್ ಆಗಿ ತೆಗೆದುಕೊಂಡು ಅದರ ಬಗ್ಗೆ ಇನ್‌ವೆಸ್ಟಿಗೇಷನ್ ಮಾಡಲಿಕ್ಕೆ ಆದೇಶ ಕೊಡಬೇಕು. ಎರಡನೆಯದಾಗಿ ಎರಡು ಗುಂಪಾಗಿವೆ, ಸ್ಟಾಫ್ ಮೆಂಬರ್ಸ್ ಆದರಲ್ಲಿ ಸಿಲುಕಿದ್ದಾರೆ. IPC Civil Rights Protection Act ಏನು ಇದೆ. ಆ ಪ್ರಾವಿಜೋ ಉಪಯೋಗ ಮಾಡಿಕೊಳ್ಳುವುದಾದರೆ, ನಮಗೆ ಸರಿಯಾದ ರೀತಿಯಲ್ಲಿ ಸಿಕ್ಕುತ್ತದೆ. ಇದನ್ನು ಹೀಗೆ ಬಿಟ್ಟರೆ ಜಾತಿವಾದದ ಬಗ್ಗೆ ಗಂಡಾಂತರ ವಾಗುತ್ತದೆ. ಇದು ನಡೆಯಬಾರದು. ಒಬ್ಬ ಶಿಕ್ಷಣ ಸಂಸ್ಥೆಯ ಪ್ರಿನ್ಸಿಪಾಲರ ಮೇಲೆ ಹಲ್ಲೆ ನಡೆದು ಅವರನ್ನು ಮರ್ಡರ್ ಮಾಡಬೇಕು ಎಂದು ಮಾಡಿರುವಂತಾದ್ದು ಖಂಡನೀಯ. ಸರ್ಕಾರ ಇದರ ತೀವ್ರತೆಯನ್ನು ಗಮನಿಸಿ ಸರಿಯಾದಂಥ ಕ್ರಮವನ್ನು ತೆಗೆದುಕೊಳ್ಳಬೇಕು ಎಂದು ನಾನು ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಯು.ಬಿ. ಬೋರ್ಕರ್.—ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯ ಮಂತ್ರಿಗಳು ಈ ಹೇಳಿಕೆ ಯನ್ನು ಪೂರ್ತಿ ಓದಿದ್ದಾರೆ. ಇದನ್ನು ನಾನು ಸ್ವಾಗತಿಸುತ್ತೇನೆ. ಈಗಾಗಲೇ ನಮ್ಮ ಮಿತ್ರರಾದ ಚೌಡಯ್ಯನವರು, ಅರಕೇರಿಯವರು ಹಲವಾರು ವಿಚಾರಗಳನ್ನು ಇದರ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ ಆದ್ದರಿಂದ, ನಾನು ಹೆಚ್ಚು ಹೇಳದೆ ಎರಡು ಮೂರು ಕ್ಲಾರಿಫಿಕೇಷನ್ ಕೇಳಬಯಸುತ್ತೇನೆ. ಶ್ರೀ ಆರ್. ವೈ. ಕಬಾಡಿ ಅವರು ಬೀದರ್ ಗವರ್ನ್‌ಮೆಂಟ್ ಪಾಲಿಟೆಕ್ನಿಕ್ ಪ್ರಿನ್ಸಿಪಾಲ್ ಹುದ್ದೆಯನ್ನು ಯಾವ ತಾರೀಖು ಸ್ವೀಕಾರ ಮಾಡಿದರು. ಈಗ ಕೇಸ್ ರಿಜಿಸ್ಟರ್ ಮಾಡಿದ್ದೇವೆ ಎಂದು ಹೇಳಿದ್ದಾರೆ. ಈ ಕೇಸನ್ನು ಯಾವ ಕಲಂ ಮೇರೆಗೆ ರಿಜಿಸ್ಟರ್ ಮಾಡಲಾಗಿದೆ. ಈಗ ೬ ಜನರನ್ನು ಅರೆಸ್ಟ್ ಮಾಡಿದ್ದೇವೆಂದು ತಿಳಿಸಿದ್ದೀರಿ. ಅವರುಗಳ ಹೆಸರುಗಳನ್ನು ತಿಳಿಸಲಿಕ್ಕೆ ಸಾಧ್ಯವಿದೆಯೇ ? ಆಸ್ಪತ್ರೆಯಿಂದ ೧೩ನೇ ಫೆಬ್ರುವರಿ ೧೯೮೧ಕ್ಕೆ ಬಿಡುಗಡೆಯಾಗಿದೆ ಎಂದರೆ ೧೨ ದಿವಸಗಳ ನಂತರ ಬಿಡುಗಡೆಯಾಗಿದೆ. ೧೨ನೇ ಫೆಬ್ರುವರಿ ೧೯೮೧ರಲ್ಲಿ ಹೊಡೆದಿರುತ್ತಾರೆ. ನನಗೆ ಬಂದಂಥ ಮಾಹಿತಿ ಪ್ರಕಾರ ೧೭ನೇ ತಾರೀಖು ಇವರ ಮೇಲೆ ಆದಂಥ ಆಘಾತದ ಬಗ್ಗೆ ಕಂಪ್ಲೆಂಟ್ ಕೊಟ್ಟಿದ್ದಾರೆ, ಸುಮಾರು ಮೂರು ನಾಲ್ಕು ದಿವಸ ಅನ್‌ಕಾನ್‌ಷಿಯಸ್ ಆಗಿದ್ದಾರೆ, ಒಬ್ಬ ಹರಿಜನ ಪ್ರಿನ್ಸಿಪಾಲರ ಮೇಲೆ ಆಘಾತವಾದಾಗ ಯಾವ ತಾರೀಖು ಅರೆಸ್ಟ್ ಮಾಡಿದ್ದಾರೆ ಎನ್ನುವ ಮಾಹಿತಿಯನ್ನು ದೊರಕಿಸಿಕೊಡಬೇಕು. ಮೊನ್ನೆ ತಾನೆ ಈ ಸದನದಲ್ಲಿ ಮಾದಯ್ಯನವರು ಪ್ರಶ್ನೆ ಕೇಳಿದಾಗ ಸರ್ಕಾರದ ವತಿಯಿಂದ ಒಂದು ಹೇಳಿಕೆ ಬಂದಿದೆ. ಅದರಲ್ಲಿ ಕಳೆದ ಮೂರು ವರ್ಷದಿಂದ ಕ್ಲಾಸ್ ಒನ್ ಆಫೀಸರ್ ಮೂರು ಜನರನ್ನು ತೆಗೆದುಕೊಂಡಿದ್ದೇವೆ ಎಂದು ಹೇಳಿಕೆಯಲ್ಲಿ ಇದೆ. ಈ ಕ್ಲಾಸ್ ಒನ್ ಆಫೀಸರ್‌ಗೆ ಹರಿಜನರಲ್ಲಿ ಚಮ್ಮಾರರ ಜಾತಿಗೆ ಸೇರಿದವರು ಮೂರು ಜನರು ಇರುವಾಗ ಉನ್ನತ ಸ್ಥಾನಕ್ಕೆ ಮೇಲೆ ಹೋಗುವಾಗ ಇದರ ಬಗ್ಗೆ ಪ್ರೊಟೆಸ್ಟ್ ನಡೆಯುತ್ತಿದೆ, ಜಾತಿವಾದದ ಮೇಲೆ ಹಲ್ಲೆ ನಡೆಯುತ್ತಿದೆ ಎಂದರೆ ಇದು ಬಹಳಷ್ಟು ಖಂಡನೀಯವಾದುದು ಇದನ್ನು ತಡೆಯಲಿಕ್ಕೆ ನಮ್ಮ ಮುಖ್ಯ ಮಂತ್ರಿಗಳು ಸರ್ವಶಕ್ತಿಯನ್ನು ಉಪಯೋಗಿಸಬೇಕೆಂದು ಈ ಸದನದ ಮೂಲಕ ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಐ.ಪಿ.ಡಿ. ಸಾಲಪ್ಪ (ಬಿನ್ನಿಪೇಟೆ).—ಈಗ ಪ್ರಿನ್ಸಿಪಾಲರ ಮೇಲೆ ನಡೆದಿರತಕ್ಕ ಹಲ್ಲೆ ಅವರನ್ನು ಕೊಲೆ ಮಾಡುವ ಮಟ್ಟಕ್ಕೆ ಹೋಗಿರುವಂಥಾದ್ದು. ಈಗ ಅವರು ಆಘಾತದ ಪರಿಸ್ಥಿತಿ ಯಲ್ಲಿರುವುದರಿಂದ ಅವರನ್ನು ಅಲ್ಲಿಂದ ಪಾರು ಮಾಡಲು ಬೆಳಗಾಂಗೆ ವರ್ಗ ಮಾಡುವುದಕ್ಕೆ ಸಾಧ್ಯವೆ? ಎಂಬುದನ್ನು ಮಾನ್ಯ ಮುಖ್ಯಮಂತ್ರಿಯವರು ತಿಳಿಸಬೇಕು. ಹಿಂದೆ ಚಿಕ್ಕಮಗಳೂರಿನಲ್ಲಿ ೧೯೭೮ನೇ ಇಸವಿಯಲ್ಲಿ ಒಬ್ಬ ವ್ಯಕ್ತಿ ಪೋಲೀಸ್ ಕಸ್ಟಡಿಯಲ್ಲಿ ಇರುವಾಗ ಆತನನ್ನು ಸಾಯಿಸಿದರೆಂದು ಮಾನ್ಯ ರಾಮಕೃಷ್ಣರವರು ತಿಳಿಸಿದ್ದರು. ಅದನ್ನು ನ್ಯಾಯಾಂಗ ತನಿಖೆ ಮಾಡಿಸಿ ವರದಿ ತರಿಸುತ್ತೇವೆಂದು ಹೇಳಿದ್ದರು. ಆದರೆ ಇದುವರೆಗೆ ೩ ವರ್ಷವಾದರೂ ಕೂಡ ಏನು ಕ್ರಮ ತೆಗೆದುಕೊಂಡಂತೆ ಕಾಣಲಿಲ್ಲ. ಹರಿಜನರನ್ನು ಕತ್ತು ಕೊಯ್ಯುವಾಗ ಅವರು ಬಾಯಿ ಮುಚ್ಚಿಕೊಂಡು ಬಿದ್ದಿರಬೇಕು. ಆವರು ಬಾಯಿ ಕೂಡ ತೆರೆಯುವಂತಿಲ್ಲ. ಈ ಪ್ರಿನ್ಸಿಪಾಲರಿಗೆ ಯಾವ ತೊಂದರೆಯೂ ಆಗದಂತೆ ಸೂಕ್ತ ರಕ್ಷಣೆಯನ್ನು ಪೋಲೀಸ್ ಅಧಿಕಾರಿಗಳಿಂದ ಕೊಡಿಸಬೇಕು. ಕ್ಲಾಸ್ ಒನ್ ಅಧಿಕಾರಿಗಳು ಹರಿಜನರ ಪೈಕಿ ಇರುವುದು ಕೇವಲ ೨-೩ ಜನ ಮಾತ್ರ. ಇವರನ್ನು ಉಳಿಸಿಕೊಳ್ಳುವುದಕ್ಕಾದರೂ ಬೆಳಗಾಂಗೆ ತಕ್ಷಣ ವರ್ಗಮಾಡಿ ಕೊಡಬೇಕೆಂದು ತಿಳಿಸಬಯಸುತ್ತೇನೆ.

ಶ್ರೀ ಆರ್. ಗುಂಡೂರಾವ್, —ಈ ವಿಚಾರ ಪೂರ್ಣವಾಗಿ ತನಿಖೆಗೆ ಒಳಪಟ್ಟಿದೆ. ೧೯ನೇ ತಾರೀಖು ಒಬ್ಬ ವ್ಯಕ್ತಿಯನ್ನೂ, ೨೭ನೇ ತಾರೀಖು ೪ ಜನರನ್ನೂ ನಂತರ ೬ನೇ ತಾರೀಖು ಇನ್ನೊಬ್ಬ ವ್ಯಕ್ತಿಯನ್ನೂ ಅರೆಸ್ಟ್ ಮಾಡಲಾಗಿದೆ. ಇಷ್ಟೇ ಅಲ್ಲದೆ ಇನ್ನು ಮುಂದಕ್ಕೂ ಈ ಅರೆಸ್ಟ್ ಮಾಡುವ ಕೆಲಸ ನಡೆದರೂ ನಡೆಯಬಹುದು. ಆ ಪ್ರಿನ್ಸಿಪಾಲರಿಗೂ ರಕ್ಷಣೆಯನ್ನು ಕೊಟ್ಟಿದೆ. ಅಲ್ಲಿ ೨ ಗುಂಪು ಗಳಿದ್ದು ಒಂದು ಗುಂಪಿನವರು ಈ ಪ್ರಿನ್ಸಿಪಾಲರು ಬಹಳ ಒಳ್ಳೆಯವರು ಇವರನ್ನು ಇಲ್ಲಿಯೇ ಉಳಿಸಿ ಕೊಳ್ಳಬೇಕೆಂದೂ, ಇನ್ನೊಂದು ಗುಂಪಿನವರು ಅವರನ್ನು ವರ್ಗ ಮಾಡಬೇಕೆಂದೂ ಹೇಳುತ್ತಿದ್ದಾರೆ. ಈ ವಿಚಾರವನ್ನು ವಿದ್ಯಾ ಇಲಾಖೆ ಮೂಲಕ ತನಿಖೆ ಮಾಡಿಸುತ್ತಿದ್ದೇವೆ. ಒಳ್ಳೆಯ ಅಧಿಕಾರಿಯನ್ನು ಇಟ್ಟುಕೊಳ್ಳಬೇಕೆಂದು ಸರ್ಕಾರ ಪ್ರಯತ್ನ ಮಾಡುತ್ತಿದೆ. ಮತ್ತೊಂದು ಕಡೆ ಅವರಿಗೆ ಯಾರು ತೊಂದರೆ ಮಾಡಿದ್ದಾರೆ, ಅವರ ಮೇಲೆ ಕ್ರಮ ತೆಗೆದುಕೊಳ್ಳುವಂತೆ ಹೇಳಿದ್ದೇವೆ. ಅನ್ಯಾಯಗಳು ನಡೆಯುವುದನ್ನು ನೋಡಿಕೊಂಡು ಸರ್ಕಾರ ಸುಮ್ಮನೆ ಕೂತುಕೊಳ್ಳುವುದಿಲ್ಲ. ಮಾನ್ಯ ಚೌಡಯ್ಯ ನವರು ಏನು ಹೇಳಿದರೋ. ಆಲ್ಲಿನ ಲೋಕಲ್ ಪೇಪರ್‌ನಲ್ಲಿ ಎಸ್‌ಪಿ ಏನು ಹೇಳಿದ್ದಾರೋ ನಮಗೆ ಗೊತ್ತಿಲ್ಲ. ಇದನ್ನು ಇಲ್ಲಿಗೇ ಬಿಟ್ಟು ಮುಂದೆ ಏನಾಗುತ್ತದೋ ನೋಡೋಣ.

ಇನ್ನು ಮಾನ್ಯ ಸಾಲಪ್ಪನವರು ಮಾತನಾಡುತ್ತಾ, ಈ ಪ್ರಿನ್ಸಿಪಾಲರನ್ನು ಬೆಳಗಾಂಗೆ ವರ್ಗಮಾಡ ಬೇಕೆಂದು ಸೂಚಿಸಿದರು. ಆದರೆ ಈ ವಿಚಾರ ಅಡ್ಮಿನಿಸ್ಟ್ರೇಷನ್‌ಗೆ ಸಂಬಂಧಪಟ್ಟಿದ್ದು.

ಶ್ರೀ ಟಿ. ಚೌಡಯ್ಯ.—ಮಾನ್ಯ ಸಭಾಧ್ಯಕ್ಷರೆ, ಈ ಪೋಲೀಸರ ಅಲಕ್ಷ್ಯದ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಬಯಸುತ್ತೇನೆ ಪದೇ ಪದೇ ಇಂಥ ಘರ್ಷಣೆಗಳು ಆಗುತ್ತಲೇ ಇರುತ್ತವೆ. ಇವತ್ತು ಒಂದು ಕಡೆ ಆದರೆ, ನಾಳೆ ಇನ್ನೊಂದು ಕಡೆ ಆಗುತ್ತದೆ. ಈ ಘಟನೆ ಅಸೂಯೆಯಿಂದ ನಡೆದಿರ ತಕ್ಕದು, ಜಾತೀಯ ಸೌಹಾರ್ದತೆಯಲ್ಲಿ ನಡೆದಿರತಕ್ಕದು. ನಿರಪರಾಧಿಗಳ ಮೇಲೆ ಹಲ್ಲೆ ನಡೆಯುವುದನ್ನು ಪೋಲೀಸರು ತಡೆಗಟ್ಟಬೇಕು. ಇದನ್ನು ಮಾಡಬೇಕೆಂಬ ಮನಸ್ಸು ತಮಗೆ ಇದೆ ಎಂಬುದು ನನಗೆ ಗೊತ್ತಿದೆ. ತಾವು ಈಗ ಪೋಲೀಸ್ ಅಧಿಕಾರಿಗಳ ಮೇಲೆ ಸೂಕ್ತ ಕ್ರಮ ತೆಗೆದುಕೊಂಡರೆ ಇಂಥ ವಿಚಾರ ಗಳಲ್ಲಿ ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತದೆ ಎಂಬುದೂ ಪೋಲೀಸರಿಗೂ ಗೊತ್ತಾಗುವುದಲ್ಲದೆ, ಬೇರೆ ಅಧಿಕಾರಿಗಳಿಗೂ ಕೂಡ ಗೊತ್ತಾಗುತ್ತದೆ. ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ಎಂಬುದನ್ನು ತಾವು ತಿಳಿಸಬೇಕು.

MATTER UNDER RULE 312

re : Strike by the students of Bangalore Pharmacy College.

ಅಧ್ಯಕ್ಷರು.—ಫಾರ್ಮಸಿ ಕಾಲೇಜಿನ ವಿದ್ಯಾರ್ಥಿಗಳು ಮುಷ್ಕರ ಮಾಡುತ್ತಿರುವ ಬಗ್ಗೆ ಶ್ರೀ ಯುತರಾದ ಎ. ಲಕ್ಷ್ಮೀಸಾಗರ್‌ರವರು ಎಂ. ಚಂದ್ರಶೇಖರ್‌ರವರು ಹಾಗೂ ಪಿ. ರಾಮದೇವ್‌ರ್‌ರವರು ನಿಯಮ ೩೧೨ರ ಕೆಳಗೆ ಕೊಟ್ಟಿರತಕ್ಕ ವಿಷಯ.

SRI A. LAKSHMISAGAR (Chickpet).—Sir, the Pharmacy students have been on an indefinite hunger strike since 9th February 1981. They have made representations to the Government and have brought to the notice of the Government the grievances and the problems they are facing and they sought redressal of those grievances from the authorities including the Hon. Minister for Health: Since they were not attended to, they have to go on hunger strike and still they are on hunger strike. Sir, I shall try to be very brief. Only one or three points I require consideration from the Government. Sir, first is about the capitation fee. This has assumed some dimension about which the Government has not been able to come to its grips. Similar is the situation in respect of pharmacy students. I do not want to go